13)	ಯಂಕಚಿಮಣಿನಾಗರ	ಏಪ್ರಿಲ್	1994
14)	ಕಾಕನೂರ	ಆಗಸ್ಟ್	1995
15)	ನೀರಬೂದಿಹಾಳ	ಆಗಸ್ಟ್	1995
16)	ಕಾಗಲಗೊಂಬ	ಆಗಸ್ಟ್	1995

ಅ) ಬೇಡಿಕೆ ಬಂದಲ್ಲಿ ಸದರಿ ಗ್ರಾಮಗಳಿಗೆ 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

709 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬಾದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಹಳ್ಳಿಗಳಿಗೆ ರ. 20.00 ಲಕ್ಷ ರೂಪಾಯಿಗಳ ವಿಶೇಷ ಅನುದಾನ ಬಿಡುಗಡೆ ಮಾಡಲು ಸರ್ಕಾರ ಒಪ್ಪಿದೆಯೇ?*

ಆ) *ಮಂತ್ರಿಗಳ ಆದೇಶದಂತೆ ಜಿಲ್ಲಾ ಪಂಚಾಯತಿಯವರು ಕಳುಹಿಸಿರುವ ಪ್ರಸ್ತಾವನೆಗೆ ಸರ್ಕಾರ ಶೀಘ್ರವಾಗಿ ಮಂಜೂರಾತಿ ನೀಡಿ, ಕೆಲಸ ಪ್ರಾರಂಭಿಸುತ್ತದೆಯೇ?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಕಳಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಆರ್.ಇ.ಪಿ. ಸ್ಕೀಮ್‌ನಲ್ಲಿ ಭಟ್ಕಳ ತಾಲ್ಲೂಕಿನ ವಿದ್ಯುತ್ತೀಕರಣದ ಕುರಿತು

711 - ಶ್ರೀ ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೇಂದ್ರ ಸರ್ಕಾರದ ಆರ್.ಇ.ಪಿ. ಸ್ಕೀಮ್‌ನ ಅನ್ವಯ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು? ಎಷ್ಟು ಹಣ ಖರ್ಚಾಗಿದೆ?*

ಆ) *ಗ್ರಾಮಾಂತರದಲ್ಲಿರುವ ಮಜರ್‌ಗಳಿಗೆ (ಹಾಮ್ಲೆಟ್ ಎಲೆಕ್ಟ್ರಿಫಿಕೇಷನ) ವಿದ್ಯುತ್ ಪೂರೈಸಲು ಈ ಯೋಜನೆಯನ್ವಯ ಅಂದಾಜು ಪತ್ರಗಳನ್ನು ಸಿಬ್ಬಂದಿ ಕೊರತೆಯಿಂದಾಗಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಭಟ್ಕಳ ತಾಲ್ಲೂಕಿನಲ್ಲಿ ಆರ್.ಇ.ಪಿ. ಸ್ಕೀಮ್‌ನಲ್ಲಿ ಮಜರೆಗಳ ವಿದ್ಯುದ್ದೀಕರಣಕ್ಕಾಗಿ ರೂ. 113.53 ಲಕ್ಷದ ಅಂದಾಜು ವೆಚ್ಚದ ಒಂದು ಹೊಸ ಯೋಜನೆಯನ್ನು ರೂಪಿಸಿ ಅದನ್ನು ಮಂಜೂರಾತಿಗಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮ, ದೆಹಲಿರವರಿಗೆ ಕಳುಹಿಸಿದ್ದು ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.